ತರಗತಿಗೆ 50 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಆಯ್ಕೆ ಪರೀಕ್ಷೆ ನಡೆಸಿ, ಮೆರಿಟ್ ಮತ್ತು ಮೀಸಲಾತಿ ನಿಯಮದನ್ವಯ ಕೌನ್ಸಲಿಂಗ್ ಮೂಲಕ ದಾಖಲು ಮಾಡಿಕೊಳ್ಳಲಾಗುವುದು.

ಹೆಣ್ಣು ಮಕ್ಕಳಿಗಾಗಿ ಪ್ರಾರಂಭಿಸಲಾದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ 6ನೇ ತರಗತಿಗೆ ದಾಖಲು ಮಾಡಿಕೊಳ್ಳುವಾಗ ಶೇ.50 ರಷ್ಟು ಸೀಟುಗಳನ್ನು ತಾಲ್ಲೂಕು ವಿದ್ಯಾರ್ಥಿಗಳಿಗೆ ಮೀಸಲಿಟ್ಟು, ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಆದರೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಈ ನಿಯಮ ಇರುವುದಿಲ್ಲ. ಆದಾಗ್ಯೂ ಯಾವುದೇ ತಾಲ್ಲೂಕಿನ ವಿದ್ಯಾರ್ಥಿಗಳು ಜಿಲ್ಲೆಯ/ಪಕ್ಕದ ಜಿಲ್ಲೆಗಳ ವಸತಿ ಶಾಲೆಗಳಿಗೆ ಆಯ್ಕೆ ಪರೀಕ್ಷೆಗೆ ಹಾಜರಾಗಿದ್ದು, ಅರ್ಹತೆ ಮತ್ತು ಮೀಸಲಾತಿಯನ್ವಯ ದಾಖಲಾತಿ ಪಡೆಯಲು ಅವಕಾಶವಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ತಾಲ್ಲೂಕು ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಸೀಟುಗಳನ್ನು ಮೀಸಲಿಡುವ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಈ. ತುಕಾರಾಂ: ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿದೆ. ನಾನು ಇಷ್ಟನ್ನು ಮಾತ್ರ ಸರಳವಾಗಿ ಕೇಳುತ್ತೇನೆ. ನಮ್ಮ ತಾಲ್ಲೂಕು ಶಿಕ್ಷಣದಲ್ಲಿ ಬಹಳ ಹಿಂದುಳಿದಿದೆ. ಅಲ್ಲಿ 5 ವಸತಿ ಶಾಲೆಗಳನ್ನು ಕೊಟ್ಟಿದ್ದಾರೆ.

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಇಲಾಖಾ ಸಚಿವರು) (ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಮುಂದಿನ ಪ್ರಶ್ನೆ ಮುಗಿಯುವುದರೊಳಗೆ ಉತ್ತರವನ್ನು ಮಾನ್ಯ ಸಚಿವರಿಂದ ಕೊಡಿಸುತ್ತೇನೆ.

ಅಧ್ಯಕ್ಷರು: ತುಕಾರಾಮ್‌ರವರೆ, ಆಮೇಲೆ ಉತ್ತರ ಕೊಡಿಸುತ್ತಾರಂತೆ. ಮುಂದಿನ ಗಮನ ಸೆಳೆಯುವ ಸೂಚನೆ ಬಿ.ಎನ್. ವಿಜಯಕುಮಾರ್.

ವಿಷಯ: ಬಿ.ಬಿ.ಎಂ.ಪಿ. ವ್ಯಾಪ್ತಿಯ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ತೆರವುಗೊಳಿಸುವಂತೆ ಉಚ್ಚ

ನ್ಯಾಯಾಲಯ ನೀಡಿರುವ ಆದೇಶವನ್ನು ಪಾಲಿಸದಿರುವುದರಿಂದ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಬಿ.ಎನ್. ವಿಜಯಕುಮಾರ್ (ಜಯನಗರ): ಮಾನ್ಯ ಅಧ್ಯಕ್ಷರೆ, ಬಿ.ಬಿ.ಎಂ.ಪಿ. ವ್ಯಾಪ್ತಿಯ ಹಲವಾರು ಪ್ರದೇಶಗಳಲ್ಲಿ ಅದರಲ್ಲೂ ಪ್ರಮುಖ ರಸ್ತೆಗಳ ಪಾದಚಾರಿ ಮಾರ್ಗಗಳಲ್ಲಿ ಒತ್ತುವರಿ ಮಾಡಿಕೊಂಡಿರುವವರನ್ನು ತೆರವುಗೊಳಿಸುವಂತೆ ರಾಜ್ಯ ಉಚ್ಚ ನ್ಯಾಯಾಲಯ ಸೂಚನೆ ನೀಡಿದ್ದರೂ ಸಹ ಈವರೆಗೆ ನ್ಯಾಯಾಲಯದ ಆದೇಶ ಕಟ್ಟುನಿಟ್ಟಾಗಿ ಪಾಲನೆಯಾಗದೆ, ಪಾದಚಾರಿಗಳು ನಡೆದಾಡಲು ಇರುವ ಫುಟ್‌ಪಾತ್‌ಗಳನ್ನು ಒತ್ತುವರಿ ಮಾಡಿಕೊಂಡಿರುವುದರಿಂದ ಪಾದಚಾರಿಗಳಿಗೆ ತುಂಬಾ ತೊಂದರೆಯಾಗುತ್ತಿದ್ದು, ಹೈಕೋರ್ಟ್ ಆದೇಶದಂತೆ ಒತ್ತುವರಿಯನ್ನು ತೆರವುಗೊಳಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ನೆಳೆಯಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ರಸ್ತೆಗಳಲ್ಲಿನ ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿಕೊಂಡು ವ್ಯಾಪಾರ ಮಾಡಿಕೊಂಡಿದ್ದ ರಸ್ತೆ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಸಂಬಂಧ ರಾಜ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶದ ಪ್ರಕಾರ ಎಲ್ಲಾ ಆದೇಶಗಳನ್ನು ಪಾಲಿಸಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಪಾದಚಾರಿ ಮಾರ್ಗಗಳಲ್ಲಿ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳನ್ನು ತೆರವುಗೊಳಿಸಲು

1) ವಾರ್ಡ್ ಮಟ್ಟದ ಅಧಿಕಾರಿಗಳಿಂದ ಅರಿವು ಮೂಡಿಸಲು ಭಿತ್ತಿ ಪತ್ರ ವಿತರಿಸಿ ಆಟೋಗಳಲ್ಲಿ ಪ್ರಚಾರ ಮಾಡುವುದು.

2) ಆಗಿಂದಾಗ್ಗೆ ರಸ್ತೆ ಅತಿಕ್ರಮಿಸಿ ಅಂಗಡಿ ಮುಂಗಟ್ಟುಗಳನ್ನು ನಡೆಸುತ್ತಿರುವವರ ವಸ್ತುಗಳನ್ನು ಕಂಟ್ರೋಲ್ ರೂಂ ವತಿಯಿಂದ ವಶಕ್ಕೆ ಪಡೆಯಲಾಗುವುದು. ದಂಡ ವಿಧಿಸುವುದು ಮತ್ತು ಪರವಾನಗಿ ರದ್ದು ಮಾಡಲಾಗುವುದು. ಈ ಕ್ರಮಗಳಿಂದ ಜನರು ಓಡಾಡುವುದಕ್ಕೆ

ಮತ್ತು ವಾಹನ ಸಂಚಾರಕ್ಕೆ ಸುಗಮವಾಗಿ ಸಂಚರಿಸಲು ಅನುವು ಆಗುತ್ತದೆ.

ಶ್ರೀ ಬಿ.ಎನ್. ವಿಜಯಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಎಲ್ಲಿಯೂ ಈ ಕೆಲಸವಾಗಿಲ್ಲ. ಫುಟ್‌ಪಾತ್‌ನಲ್ಲಿ permanent ಆಗಿ ಅಂಗಡಿಗಳನ್ನು ಹಾಕಿಕೊಂಡಿರುವಂಥವುಗಳು ತುಂಬಾ ಇವೆ. ಯಾವುದೇ ರೀತಿಯ ಕ್ರಮಗಳನ್ನು ಜರುಗಿಸಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಸರಿಯಾದಂಥ ಮಾಹಿತಿಗಳನ್ನು ಅಧಿಕಾರಿಗಳು ಕೊಟ್ಟಿಲ್ಲವೆಂದು ಕಾಣುತ್ತದೆ. ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ದಯವಿಟ್ಟು encroachment ತೆಗೆಯಬೇಕು, ಈ ಕೆಲಸವನ್ನು ಯಾರು ಮಾಡಿಲ್ಲವೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈಗ ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುತ್ತಾರಲ್ಲ ಅವರನ್ನು ತೆರವುಗೊಳಿಸಬೇಕೆಂದು ಕೋರ್ಟ್ ಆದೇಶವು ಕೂಡ ಇದೆ. ಈಗಾಗಲೇ Ward committee ಮಟ್ಟದ ಅಧಿಕಾರಿಗಳ ಜೊತೆಯಲ್ಲಿ ಈ ಬಗ್ಗೆ ಪ್ರಚಾರವನ್ನು ಕೂಡ ಮಾಡಿಲಾಗುತ್ತಿದೆ. ಯಾವುದೇ ಫುಟ್‌ಪಾತ್ ಮೇಲೆ ವ್ಯಾಪಾರಗಳನ್ನು ಮಾಡಬಾರದು, ಸಾರ್ವಜನಿಕರಿಗೆ ತೊಂದರೆಯಾಗಬಾರದು, ಜನರು ಓಡಾಡುವುದಕ್ಕೆ ತೊಂದರೆಯಾಗಬಾರದು, ಹೀಗೆ ಇದೆಲ್ಲವನ್ನು ಮಾಡಿಸುತ್ತಿದ್ದೇವೆ. ಎಲ್ಲೆಲ್ಲಿ ಫುಟಪಾತ್ ಮೇಲೆ ವ್ಯಾಪಾರ ಮಾಡುತ್ತಾರೋ ಆ ವಸ್ತುಗಳನ್ನೆಲ್ಲ seize ಮಾಡಿಕೊಳ್ಳತಕ್ಕಂಥದ್ದು, ಅವನ್ನು ತೆಗೆದುಹಾಕತಕ್ಕಂಥದ್ದು, ಇವೆಲ್ಲಾ ಮಾಡುತ್ತಿದ್ದಾರೆ. ಆದರೂ ಕೂಡ ಅವುಗಳನ್ನು ತೆಗೆಯುತ್ತಿದ್ದರೂ ಅವರು ಮತ್ತೆ ಮತ್ತೆ ಬಂದು ಸೇರಿಕೊಳ್ಳುತ್ತಿರುವವರ ಮೇಲೆ ಕಠಿಣವಾದಂಥ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎನ್. ವಿಜಯಕುಮಾರ್: ಮಾನ್ಯ ಅಧ್ಯಕ್ಷರೆ, ಜಯನಗರ shoppıng complex ಹತ್ತಿರ ಫುಟ್‌ಪಾತ್‌ನಲ್ಲಿ permanent ಆಗಿ ಅಂಗಡಿಗಳನ್ನು ಹಾಕಿಕೊಂಡಿರುವಂಥವುಗಳು ತುಂಬಾ ಇವೆ. ನಾನು ಹತ್ತಾರು ಬಾರಿ ಈ ಬಗ್ಗೆ ಪೊಲೀಸ್ ಕಮೀಷನರ್‌ರವರಿಗೆ ಮನವಿ ಕೊಟ್ಟಿದ್ದೇನೆ. ಮಹಾನಗರಪಾಲಿಕೆಗೂ ಕೊಟ್ಟಿದ್ದೇನೆ. ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ: ಆಯಿತು ತೆರವು ಮಾಡಿಸೋಣ. ಅದನ್ನು ತೆರವುಗೊಳಿಸುತ್ತೇವೆ.

ಅಧ್ಯಕ್ಷರು: ಮುಂದಿನದ್ದು, ಹೆಚ್.ಎಸ್. ಪ್ರಕಾಶ್, ಕುಮಾರಸ್ವಾಮಿ, ರೇವಣ್ಣ, ವಗೈರೆ, ವಗೈರೆ, ನೋಡ್ರಿ, ಒಬ್ಬರದ್ದು ಒಂದಕ್ಕಿಂತ ಜಾಸ್ತಿ ಹಾಕಬೇಡಿ.

ಶ್ರೀ ಹೆಚ್.ಎಸ್. ಪ್ರಕಾಶ್: ಉತ್ತರ ಬಂದಿಲ್ಲ.

ಅಧ್ಯಕ್ಷರು: ಉತ್ತರ ಬಂದಿಲ್ಲವೆಂದರೆ, ಉತ್ತರ ಬಂದಾದ ಮೇಲೆ ಕಳುಹಿಸಿಕೊಡುತ್ತೇವೆ.

ವಿಷಯ: ಹಾಸನ ಜಿಲ್ಲೆ ಹಾಸನ ತಾಲ್ಲೂಕು ಕಸಬಾ ಹೋಬಳಿ ಬೂವನಹಳ್ಳಿ ಗ್ರಾಮದಲ್ಲಿ ಕಾನೂನುಬಾಹಿರವಾಗಿ ಖಾಸಗಿಯವರ ಜಮೀನನ್ನು ಟೌನ್ ಪ್ಲಾನಿಂಗ್ ಅನುಮತಿ ಪಡೆಯದೆ ಬಡಾವಣೆ ನಿರ್ಮಿಸುತ್ತಿರುವ ಹಾಗೂ ಹಾಸನ ತಾಲ್ಲೂಕು ಕಸಬಾ ಹೋಬಳಿ ಗ್ಯಾರಹಳ್ಳಿ, ದೊಡ್ಡಕೊಂಡಗೊಳ, ಮಾವಿನಹಳ್ಳಿ ಗ್ರಾಮದ ಕೆರೆ ಮತ್ತು ಕಾಲುವೆಗಳನ್ನು ಮುಚ್ಚಿ ಹಾಕಿ ಕಾನೂನುಬಾಹಿರವಾಗಿ ನಿವೇಶನಗಳನ್ನು ನಿರ್ಮಿಸುತ್ತಿರುವ ಬಗ್ಗೆ.

ಅಧ್ಯಕ್ಷರು: ನೋಡಿರಿ, ಒಬ್ಬರಿಗಿಂತ ಜಾಸ್ತಿ ಹಾಕಬೇಡಿ. ಉತ್ತರ ಬಂದಿಲ್ಲವೇ? ಇದಕ್ಕೆ ಉತ್ತರ ಬಂದಿಲ್ಲ. ಉತ್ತರ ಬಂದ ಮೇಲೆ ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು: ಉತ್ತರ ಹೇಳುವುದಾದರೆ ಹೇಳಲಿ.